ಒ.ಎಸ್.  - 81/2020
ಡಿ.ಡಬ್ಲ್ಯು. - 01

**ದಿನಾಂಕ     12-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯವರ ಪರವಾಗಿ  ಶ್ರೀ ಎಂ.ಕೆ   ವಕೀಲರಿಂದಃ**

ನೀವು ಉದ್ಯೋಗವನ್ನು ಮಾಡುತ್ತಾ ಇದ್ದಿರಾ ಎಂದರೆ ಮನೆಯಲ್ಲಿಯೇ ಇರುತ್ತೇನೆ . ವಾದಿಯರು ಏನು ದಾವೆಯನ್ನು ಸಲ್ಲಿಸಿರುತ್ತಾರೆ ಎನ್ನುವುದನ್ನು ನಿಮ್ಮ ಗೌರವಾನ್ವಿತ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುತೀರಾ ಎಂದರೆ ಹೌದು . ನೀವು ಏನು ವಿದ್ಯಾಬ್ಯಾಸ ಮಾಡಿರುತೀರಿ ಎಂದರೆ 3 ನೇ ತರಗತಿವರೆಗೆ ಓದಿರುತ್ತೇನೆ . ನಿಮ್ಮ ಗಂಡ ರಾಬರ್ಟ್ ಡಿಸೋಜರವರ ತಂದೆಯವರ ಹೆಸರು ಸಲ್ವದರ್ ಡಿಸೋಜ ಎಂದರೆ ಹೌದು . ದಾವಾ ಆಸ್ತಿಗಳ ಮೂಲತಃ ನಿಮ್ಮ ಗಂಡನವರ ತಂದೆಯವರ ಆಸ್ತಿ ಎಂದರೆ ಹೌದು . ದಾವಾ ಆಸ್ತಿಗಳ ಸರ್ವೆ ನಂಬರ ಮತ್ತು ವಿಸ್ತೀರ್ಣ ಎಷ್ಟು ಎಂದರೆ ನಮಗೆ ಸಿಕ್ಕಿರುವ ಆಸ್ತಿಯ ಸರ್ವೆ ನಂ. 360/3 ವಿಸ್ತೀರ್ಣ  1 ಎಕ್ರೆ 21 ಸೆಂಟ್ಸ್ ಆಗಿರುತ್ತದೆ ಉಳಿದ ಆಸ್ತಿಗಳಿಗೆ ಸಂಬಂಧಿಸಿದ ವಿಷಯ ಗೊತ್ತಿಲ್ಲ.  ದಾವಾ ಅಸ್ತಿಗಳ ಒಟ್ಟು  ವಿಸ್ತೀರ್ಣ 3 ಎಕ್ರೆ  10 ಸೆಂಟ್ಸ್ ಎಂದರೆ ಹೌದು . ನಿಮ್ಮ ಗಂಡನವರ ತಂದೆಯವರು ಈಗ ಮೃತರಾಗಿರುತ್ತಾರೆ ಎಂದರೆ ಹೌದು ನಿಮ್ಮ ಗಂಡನವರ ತಂದೆಯವರು ಮೃತರಾದ ನಂತರ ಅವರ ಎಲ್ಲಾ ಆಸ್ತಿಗಳು ಅವರ ಹೆಂಡತಿ ಮತ್ತು ಮಕ್ಕಳಿಗೆ ಸೇರಿದ್ದು ಎಂದರೆ ಹೌದು . ನಿಮ್ಮ ಗಂಡ ರಾಬರ್ಟ್ ಡಿಸೋಜರವರು ತೀರಿಕೊಂಡಿದ್ದಾರೆ ಅಲ್ಲವೇ ಎಂದರೆ ಹೌದು ಅವರು 2004 ರಲ್ಲಿ ತೀರಿಕೊಂಡಿದ್ದಾರೆ. ನಿಮ್ಮ ಗಂಡ ರಾಬರ್ಟ್ ಡಿಸೋಜ ರವರು ಯಾವ ಕಾರಣದಿಂದ ತೀರಿಕೊಂಡರು ಎಂದರೆ ಅವರು ಕಾನ್ಸರ್ ಕಾಯಿಲೆಯಿಂದ ಬಳಲಿ ತೀರಿಕೊಂಡರು . ನಿಮ್ಮ ಗಂಡ ರಾಬರ್ಟ್ ಡಿಸೋಜರವರು ಎಲ್ಲಿ ಕೆಲಸವನ್ನು ಮಾಡುತಿದ್ದರು ಎಂದರೆ ಮಣಿಪಾಲದಲ್ಲಿದ್ದ ಮಣಿಪಾಲ ಪ್ರೆಸ್ ನಲ್ಲಿ ಕೆಲಸವನ್ನು ಮಾಡಿಕೊಂಡಿದ್ದರು .

ನಿಮ್ಮ ಗಂಡ ರಾಬರ್ಟ್ ಡಿಸೋಜ ರವರಿಗೆ ಎಷ್ಟು ಸಂಬಳ ಬರುತಿತ್ತು ಎಂದರೆ ಗೊತ್ತಿಲ್ಲ . ನಿಮ್ಮ ಗಂಡ ತೀರಿಕೊಂಡ ನಂತರ ಪಿಂಚಣಿ ಬರುತಿತ್ತೆ ಎಂದರೆ ಇಲ್ಲ . ನಿಮ್ಮ ಗಂಡನವರ ತಂದೆಗೆ ಸೇರಿದ ಆಸ್ತಿಗಳಲ್ಲಿ 45 ಸೆಂಟ್ಸ್ ಜಾಗವನ್ನು 2004 ರಲ್ಲಿ ಇಂದಿರಾ ನಾಯಕ್ ರವರಿಗೆ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ನಿಮ್ಮ ಗಂಡನವರಿಗೆ ಚಿಕಿತ್ಸೆಯನ್ನು ಕೊಡಿಸಿರುತೀರಾ ಎಂದರೆ ಯಾವುದೇ ಆಸ್ತಿಯನ್ನು ಮಾರಾಟ

ಮಾಡಿರುವುದಿಲ್ಲ . ಪ್ರತಿವಾದ ಪತ್ರವನ್ನು ಸಲ್ಲಿಸಲು ನಿಮ್ಮ ಗೌರವಾನ್ವಿತ ವಕೀಲರಿಗೆ ನೀವೇ ಮಾಹಿತಿಯನ್ನು ನೀಡಿರುವುದು ಅಲ್ಲವೇ ಎಂದರೆ ಹೌದು . ನಿಮ್ಮ ಪ್ರತಿವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎನ್ನುವ ವಿಚಾರ ನಿಮಗೆ ಗೊತ್ತಿದೆ ಅಲ್ಲವೇ ಎಂದರೆ ಹೌದು . ದಿ. 16-04-2000 ರಂದು ಕುಟುಂಬದ ಸದಸ್ಯರು ಸಭೆಯನ್ನು ನಡೆಸಿರುತ್ತಾರೆಂದು ನಿಮ್ಮ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 17 ರಲ್ಲಿ ಬರೆಸಿರುತೀರಿ ಹಾಗೇ ಸಭೆ ನಡೆಸಿದ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಹೌದು ಆದರೇ ಸಭೆಗೆ ನನ್ನನ್ನು ಕರೆದಿಲ್ಲ. ಮರ್ಸಿ ಡಿಸೋಜರವರು ಸೇರಿದಂತೆ 11 ಜನ ಮಕ್ಕಳು ಆ ಸಭೆಯಲ್ಲಿ ಭಾಗವಹಿಸಿದ್ದ ಬಗ್ಗೆ ನಿಮ್ಮ ಗಂಡ ನಿವುಗೆ ತಿಳಿಸಿರುತ್ತಾರೆಯೇ ಮತ್ತು ಅದು ನಿಮಗೆ ತಿಳಿದಿದೆಯೇ ಎಂದರೆ ನನಗೆ ತಿಳಿಸಿರುವುದಿಲ್ಲ ಮತ್ತು ನನಗೆ ಗೊತ್ತಿಲ್ಲ . ದಿ. 16-04-2000 ರಲ್ಲಿ ನಡೆದಿದೆ ಎಂದು ನೀವು ಹೇಳಿರುವ ಸಭೆಯಲ್ಲಿ ನಿಮ್ಮ ಗಂಡ ರಾಬರ್ಟ್ ಡಿಸೋಜರವರು ಭಾಗವಹಿಸಿದ್ದರು ಮತ್ತು ಅದರ ಉಸ್ತುವಾರಿಯನ್ನು ಅವರೇ ಮಾಡಿದ್ದರು ಎಂದರೆ ಸರಿಯಲ್ಲ . ನಿಮ್ಮ ಗಂಡನವರು ತೀರಿಕೊಳ್ಳುವ ವರೆಗೆ ನೀವು ಊರಿನಲ್ಲಿಯೇ ಇದ್ದಿರಾ ಅಥವಾ ಮುಂಬಯಿನಲ್ಲಿ ಇದ್ದೀರಾ ಎಂದರೆ ಊರಿನಲ್ಲಿ ಇದ್ದೆನು . ದಿ. 16-04-2000 ರಲ್ಲಿ ಆದ ಸಭೆಯ ನಿರ್ಧಾರಕ್ಕೆ ಅನುಗುಣವಾಗಿ ವಿಭಾಗವಾಗಿರುವುದು ಎಂದರೆ 2005 ರಲ್ಲಿ ವಿಭಾಗವಾಗಿರುವುದು. ಸಭೆಯಲ್ಲಿ ನಿರ್ಧರಿಸಿದ ಷರುತ್ತುಗಳಿಗೆ ಅನುಗುಣವಾಗಿ ವಿಭಾಗಪತ್ರವನ್ನು ಮಾಡಬೇಕು ಎಂದು ನಿಮ್ಮ ಗಂಡನವರು ಹೇಳಿದ್ದರು ಎಂದರೆ ಹೌದು . 2005 ರಲ್ಲಿ ವಿಭಾಗ ಪತ್ರ ವಾದಾಗ ನಿಮ್ಮ ಅತ್ತೆ ಮರ್ಸಿ ಡಿಸೋಜರವರು ಜೀವಂತವಾಗಿದ್ದರು ಎಂದರೆ ಹೌದು . ಸದರಿ ವಿಭಾಗಪತ್ರದಲ್ಲಿ ಮರ್ಸಿ ಡಿಸೋಜರವರಿಗೆ 75 ಸೆಂಟ್ಸ್ ಮನೆಯ ಜಾಗ ನೀಡಿರುವುದು ಎಂದರೆ ಹೌದು . ಸದರಿ ವಿಭಾಗಪತ್ರದಲ್ಲಿ ಆಲ್ಫನ್ಸೋ ಡಿಸೋಜರವರಿಗೆ 40 ಸೆಂಟ್ಸ್ ಜಾಗ ಮತ್ತು ಹಂಚಿನ ಮನೆಯನ್ನು ನೀಡಿಲಾಗಿದೆ ಎಂದರೆ ಹೌದು . ರಾಬರ್ಟ್ ರವರ ಹೆಂಡತಿ ಮಕ್ಕಳಿಗೆ ಒಟ್ಟಾಗಿ 1 ಎಕ್ರೆ 21 ಸೆಂಟ್ಸ್ ಜಾಗವನ್ನು ಸದರಿ ವಿಭಾಗಪತ್ರದಲ್ಲಿ ನೀಡಿರುವುದು ಎಂದರೆ ಹೌದು . ಯುಜಿನ್ ರವರನ್ನು ಹೊರತುಪಡಿಸಿ ಉಳಿದ ಎಲ್ಲಾ ಹೆಣ್ಣು ಮಕ್ಕಳಿಗೂ ತಲಾ 5 ಸೆಂಟ್ಸ್ ಜಾಗವನ್ನು ಸದರಿ ವಿಭಾಗಪತ್ರದಲ್ಲಿ ನೀಡಿಲಾಗಿದೆ ಎಂದರೆ ಹೌದು . ರಾಬರ್ಟ್ ರವರ ಹೆಂಡತಿ ಮಕ್ಕಳಿಗೆ ಉಳಿದ ವ್ಯಕ್ತಿಗಳಿಗಿಂತ ಹೆಚ್ಚಿನ ಪಾಲು ಕೊಡಲು ಏನಾದರೂ ಕಾರಣ ಇದೆಯೇ ಎಂದರೆ ನನ್ನ ಗಂಡ ಕುಟುಂಬಕ್ಕೆ ಖರ್ಚಿಗಾಗಿ ಹಣವನ್ನು ಕೊಡುತಿದ್ದರು ಆ ಕಾರಣದಿಂದ ಹೆಚ್ಚಿನ ಭಾಗ ನೀಡಿರುತ್ತಾರೆ .ನಿಮ್ಮ ಗಂಡನವರು ಹೇಳಿದ ಪ್ರಕಾರ ಇದನ್ನು ನೀವು ಹೇಳುತ್ತಿರುವುದು ಎಂದರೆ ಹೌದು .

2000 ಇಸವಿಯಲ್ಲಿ ಆದ ಸಭೆಯಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಭಾಗಕೊಡಬೇಕು ಎಂದು ನಿರ್ಧರಿಸಿದ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಇಲ್ಲ. ವಿಭಾಗ

ಪತ್ರವನ್ನು ತಯಾರಿಸಲು ಅಗತ್ಯವಿದ್ದ ನಕ್ಷೆಯನ್ನು ತಯಾರಿಸುವ ಕೆಲಸವನ್ನು ಯಾರು ಮಾಡಿದ್ದರು ಎಂದರೆ ನನ್ನ ಮಗ ಅಂದರೆ 3 ನೇ ಪ್ರತಿವಾದಿಯವರು ಮಾಡಿರುತ್ತಾರೆ . 3 ನೇ ಪ್ರತಿವಾದಿಯವರು ಏನು ಕೆಲಸವನ್ನು ಮಾಡುತ್ತಾರೆ ಎಂದರೆ ಅವರು ಮೊದಲು ಮುಂಬಯಿನಲ್ಲಿ ಕೆಲಸ ಮಾಡುತಿದ್ದರು ಮತ್ತು ಊರಿನಲ್ಲಿ ಇರುತಿದ್ದರು ಈಗ ಹೊರದೇಶದಲ್ಲಿ ಇರುತ್ತಾರೆ . 3 ನೇ ಪ್ರತಿವಾದಿಯವರು ಮುಂಬಯಿನಲ್ಲಿ ಇರುವಾಗ ಊರಿಗೆ ವರ್ಷಕ್ಕೆ ಒಮ್ಮೆ ಬರುತಿದ್ದರೇ ಎಂದರೆ ವರ್ಷಕ್ಕೆ ಒಮ್ಮೆ ಅಥವಾ 2 ವರ್ಷಕ್ಕೆ ಒಮ್ಮೆ ಬರುತಿದ್ದರು . ನಕ್ಷೆಯನ್ನು ತಯಾರಿಸಲು ಎಲ್ಲರ ಪರವಾಗಿ 3 ನೇ ಪ್ರತಿವಾದಿಯವರೇ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು . 3 ನೇ ಪ್ರತಿವಾದಿಯವರಿಗೆ ಯಾರು ಯಾರಿಗೆ ಎಷ್ಟು ಎಷ್ಟು ಜಾಗವು ಬಂದಿರುತ್ತದೆ ಎಂದು ಯಾರು ತಿಳಿಸಿದರು ಎಂದರೆ ಅವರೇ ಅದನ್ನು ತೀರ್ಮಾನಿಸಿರುವುದು . ವಿಭಾಗಪತ್ರವನ್ನು ಮಾಡುವ ಸಮಯದಲ್ಲಿ ನೀಡಿರರುವ ಜಿಪಿಎಗಳನ್ನು ಯಾರು ನೀಡಿರುತ್ತಾರೆ ಎಂದರೆ 3 ನೇ ಪ್ರತಿವಾದಿಯವರೇ ಜಿಪಿಎಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. 1 ನೇ ಪ್ರತಿವಾದಿಯವರು ಈಗ ಎಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಅತ್ತೆ ,ಮತ್ತು ಮಕ್ಕಳು ಯುಜಿನ್ ಮತ್ತು ಇತರರ ಮೇಲೆ OS No. 119/2007 ನ್ನು ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಒಂದು ವ್ಯವಸ್ಥಾ ಪತ್ರವನ್ನು ರದ್ದುಗೊಳಿಸುವಂತೆ ಸಲ್ಲಿಸಿದ್ದ ವಿಚಾರ ನಿಮಗೆ ಗೊತ್ತಿದೆಯೇ ಎಂದರೆ ಇಲ್ಲ. ಈ ದಾವೆಯಲ್ಲಿ ವಾದಿಯರು ಯಾವ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೇ ಎಂದರೆ ಗೊತ್ತಿಲ್ಲ . ಈ ದಾವೆಯಲ್ಲಿ ನೀವು ಯಾವುದಾದರೂ ದಾಖಲೆ ಹಾಜರುಮಾಡಿರುತೀರಾ ಎಂದರೆ ಇಲ್ಲ . ದಾವಾ ಆಸ್ತಿಗಳ ವಿಸ್ತೀರ್ಣ ಮತ್ತು ಅವುಗಳ ಚೆಕ್ಕು ಬಂದಿ ಹಾಗೂ ಅವು ಎಲ್ಲಿ ಇರುತ್ತದೆ ಎಂದರೆ ಇಲ್ಲ . 8 ನೇ ವಾದಿಯವರ ತಂದೆಯ ಹೆಸರು ರೈಮಂಡ್ ಮಸ್ಕರೆನ್ಸಸ್ ಎಂದರೆ ಹೌದು. 8 ನೇ ವಾದಿಯವರ ತಂದೆ 6.12.2006 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಹೌದು .

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 81/2020

ಡಿ.ಡಬ್ಲ್ಯು. - 01

ಒ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಮತ್ತು ಸಿ.ಜೆ.ಎಂ

ಉಡುಪಿ.